**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ. 100/2020**

**ಸಿ.ಡಬ್ಲ್ಯೂಃ 12 ಪಿ.ಡಬ್ಲ್ಯೂಃ 5**

| | | |
|---|---|---|
| ಸಾಕ್ಷಿದಾರನ ಹೆಸರು | : | ನಾರಾಯಣ ಸ್ವಾಮಿ |
| ತಂದೆಯ ಹೆಸರು | : | ಕೇಶವಪಿಳ್ಳೇ |
| ವಯಸ್ಸು | : | 58 ವರ್ಷ |
| ಕೆಲಸ | : | ಪಿ ಎಸ್ ಐ ತೆಕ್ಕಲಕೋಟೆ |
| ವಾಸ | : | ತೆಕ್ಕಲಕೋಟೆ |

**ಸಾಕ್ಷಿಗೆ ದಿನಾಂಕಃ 17.12.2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ**

1. ನಾನು 2015 ರಿಂದ 2020 ರವರೆಗೂ ತೆಕ್ಕಲಕೋಟೆ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 10.09.2019 ರಂದು ಠಾಣೆಯಲ್ಲಿ ಇದ್ದಾಗ ಬೆಳಗ್ಗ 03.30 ಗಂಟೆಗೆ ಚಾಸಾ 1 ರವರು ಹಾಜರಾಗಿ ದೂರು, ಪಂಚನಾಮೆ ಹಾಗೂ ಮುದ್ದೆ ಮಾಲು ಹಾಜರುಪಢಿಸಿದ್ದು ಅದನುನ ಸ್ವೀಕರಿಸಿ ಅದನ್ನು ಠಾಣಾ ಗುನ್ನಾ ಸಂಖ್ಯೆ 97-2019 ರಂತೆ ಪ್ರಕರಣ ದಾಖಲಿಸಿ ಪ್ರ.ವ.ವ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆನು. ಸಾಕ್ಷಿ ಸಹಿಯನ್ನು ನಿಪಿಃ 2 (ಬಿ) ಮತು 3(ಬಿ) ಎಂದು ಗುರುತಿಸಲಾಯಿತು. ಪಿ ಎಫ್ ಸಲ್ಲಿಸಿದೆನು. ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದೆನು. ಅದೇ ದಿನ ಚಾಸಾ 4 ರಿಂದ 6 ರವರ ಹೇಳಿಕೆ ಪಡೆದೆನು. ಆರೋಪಿತರ ಸ್ವ ಖುಷಿ ಹೇಳಿದೆನು. ಜಪ್ತದ ಮು.ಮಾ ವನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟೆನು. ರಾಸಾಯನಿಕ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡೆನು. ಸದರಿ ವರದಿಯನ್ನು ನಿಪಿಃ 4 ಮತ್ತು ಸಾಕ್ಷಿ ಸಹಿಯನ್ನು ನಿಪಿಃ 4(ಎ) ಎಂದು ಗುರುತಿಸಲಾಯಿತು. ಉಳಿದ ಮು ಮಾ ನ್ನು ಅಬಕಾರಿ ಇಲಾಖೆಗೆ ಪತ್ರದ ಮುಖಾಂತರ

ಹಸ್ತಾಂತರಿಸಿದೆನು. ಸಾಕ್ಷಿ ಪತ್ರ ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಪಿಃ 5 ಮತ್ತು ಸಾಕ್ಷಿ ಸಹಿಯನ್ನು ನಿಪಿಃ 5(ಎ) ಎಂದು ಗುರುತಿಸಲಾಯಿತು. ಜಪ್ತದ ಮದ್ಯದ ಬ್ಯಾಚ್ ಮಾಹಿತಿ  ಕೋರಿ ಅಬಕಾರಿ ನಿರೀಕ್ಷಕರಿಗೆ ಪತ್ರ ಬರೆದನು. ಸದರಿ ದಾಖಲೆಯನ್ನು ನಿಪಿಃ 6 ಮತ್ತು ಸಾಕ್ಷಿ ಸಹಿಯನ್ನು ನಿಪಿಃ 6(ಎ) ಎಂದು ಗುರುತಿಸಲಾಯಿತು. ಸದರಿ ಎರಡು ವಿವರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡೆನು. ಸದರಿ ದಾಖಲೆಗಳನ್ನು ನಿಪಿಃ 7 ಮತ್ತು 8 ಮತ್ತು ಸಾಕ್ಷಿ ಸಹಿಯನ್ನು ನಿಪಿಃ 7(ಎ) ಮತ್ತು 8(ಎ) ಎಂದು ಗುರುತಿಸಲಾಯಿತು. ಆರೋಪಿ ನಂ 1 ಮತ್ತು 2 ರವರಿಗೆ ವೈನ್ ಶಾಪ್ ನಿಂದ ವೆಂಡಾರ್ ಆದ ಆರೋಪಿ ನಂ 3 ಮತ್ತು 4 ರವರು ಅನಧಿಕೃತವಾಗಿ ಮದ್ಯವನ್ನು ಮಾರಾಟ ಮಾಡಿದ ಬಗ್ಗೆ ಸಾಕ್ಷ್ಯಧಾರ ಸಿಕ್ಕಿದ್ದರಿಂದ 1 ರಿಂದ 4 ಆರೋಪಿತರ ವಿರುದ್ದ ದೋಷರೋಪಣೆ ಪಟ್ಟಿ ಸಲ್ಲಿಸಿದೆನು.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು ಮಾ ನಂ 1 ರಿಂದ 12  ಹಾಗೂ ಆರೋಪಿತರನ್ನು ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ</u>**

3. ಸಾಕ್ಷಿದಾರ ನಂ 4 ರಿಂದ 6 ರವರ ಹೇಳಿಕೆಗಳನ್ನು ಪೋಲಿಸ್ ಠಾಣೆಯಲ್ಲಿ ಪಡೆದಿದ್ದೆನೆ. ಮು ಮಾ ಗೆ ಪಂಚನಾಮೆ ಮಾಡಿದ ಸ್ಥಳದಲ್ಲಿ ಸೀಲ್ ಹಾಕಿದರು. ಮು ಮಾ ನ ಒಳಗಡೆ ಏನು ಇದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು  ಹೆಸರಿನ ಅನುಸಾರವಾಗಿ  ನಿಖರವಾಗಿ ಗುರುತಿಸಲು ಆಗುವುದಿಲ್ಲ. ಗೋವಿಂದಪ್ಪ ಹಾಗೂ ಶ್ರೀಧರ ವೈನ್ ಶಾಪ್ ಮಾಲೀಕತರು ಇರುತ್ತಾರೆ. ಅವರ ವಿರುದ್ದ ದೋಷರೋಪಣಿ ಪಟ್ಟಿ ಸಲ್ಲಿಸಿಲ್ಲ. ವೈನ್ ಶಾಪ್ ಮಾಲೀಕರ ಬಳಿ ಮದ್ಯ ಖರೀದಿ ಮಾಡಿದ ಬಿಲ್‌ಗಳ ಬಗ್ಗೆ ನಾನು ತನಿಖೆ ಮಾಡಿಲ್ಲ. ಚಾಸಾ 7 ರವರ ಮೂಲಕ ಮು ಮಾ ನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತೇನೆ. ಆರೋಪಿ ನಂ 1 ಮತ್ತು 2 ರವರು ತಾವು ಆರೋಪಿ ನಂ 3 ಮತ್ತು 4

ರವರ ಬಳಿ ಮದ್ಯ ಖರೀದಿ ಮಾಡಿದ ಬಗ್ಗೆ ಲಿಖಿತವಾಗಿ ಬರೆದುಕೊಟ್ಟಿಲ್ಲ, ಹೇಳಿಕೆ ಮಾತ್ರ ನೀಡಿದ್ದಾರೆ. ಘಟನಾ ಸ್ಥಳಕ್ಕೆ ನಾನು ಹೋಗಿಲ್ಲ ಎಂದರೆ ಸರಿ. ಚಾಸಾ 1 ನನ್ನ ಮೇಲಾಧಿಕಾರಿ ಎಂದರೆ ಸರಿ. ಚಾಸಾ 1 ಯಾವುದೇ ದಾಳಿ, ಪಂಚನಾಮೆ ಹಾಗೂ ಜಪ್ತ ಮಾಡಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕೆ ಸಂಖ್ಯೆಗೋಸ್ಕರ ನಾನು ಸುಳ್ಳು ದೂರು ದಾಖಲು ಮಾಡಿದ್ದೆನೆ ಎಂದರೆ ಸರಿಯಲ್ಲ. ಮು.ಮಾ ಗೂ ಆರೋಪಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದೋಷರೋಪಣಿ ಪಟ್ಟಿ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**